**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಉಪಸ್ಥಿತರುಃ ಸಂತೋಷ ಕೊಠಾರಿ,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹೆಚ್.ಡಿ.ಕೋಟೆ**

# ಸಿ. ಸಿ. ನಂ. 1189/2024

ಪಿರ್ಯಾದಿ : ಶ್ರೀ.ಹೆಚ್.ಆರ್. ರವಿಕುಮಾರ್
ಬಿನ್ ಲೇಟ್.ಹೆಚ್.ಆರ್.ರಾಮಶೆಟ್ಟಿ
ವಯಸ್ಸು 57 ವರ್ಷ,
ವಾಸಃ ಹತ್ವಾಳ್ ಗ್ರಾಮ, ಹಂಪಾಪುರ ಹೋಬಳಿ,
ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.
(ಶ್ರೀ.ಬಿ.ಎಸ್.ಎಸ್., ವಕೀಲರು)

***ವಿರುದ್ಧ***

ಆರೋಪಿ : ಶ್ರೀ.ಶೃತಿ ಕೋಂ ಶ್ರೀನಿವಾಸ
ವಯಸ್ಸು 35 ವರ್ಷ,
ವಾಸಃ ಚಿಕ್ಕನಂದಿ ಗ್ರಾಮ,
ಹಂಪಾಪುರ ಹೋಬಳಿ,
ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.
ಮತ್ತು
ಶ್ರೀ.ಶೃತಿ ಕೋಂ ಶ್ರೀನಿವಾಸ
ವಯಸ್ಸು 35 ವರ್ಷ,
ವಾಸಃ ಮಾರಮ್ಮ ದೇವಸ್ಥಾನದ ಎದುರು,
ಶ್ರೀರಾಂಪುರ ಗ್ರಾಮ, ಕಸಬಾ ಹೋಬಳಿ,
ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ.
( ಜಿ.ಎನ್.ಎನ್. ವಕೀಲರು)

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ 2023 ಕಲಂ. 351 ರಡಿ ದಾಖಲಿಸಿದ ಆರೋಪಿತರ**

**ಹೇಳಿಕೆ ::**

ಪ್ರಶ್ನೆಃ 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆ: 2 ಫ್ರಾಸಾ–1 ಹೆಚ್.ಆರ್. ರವಿಕುಮಾರ್ ತಮ್ಮ ಮುಖ್ಯ ವಿಚಾರಣೆಯಲ್ಲಿ, ಹೆಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರ ಹೋಬಳಿ ಚಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.17/1ರಲ್ಲಿರುವ 3.02 ಎಕರೆ ಜಮೀನಿನ ಮಾಲೀಕರಾಗಿದ್ದು, ಸದರಿ ಜಮೀನನ್ನು ಆರೋಪಿಯಾದ ನಿಮ್ಮ ಗಂಡನಾದ ಶ್ರೀನಿವಾಸ ಎಂಬುವರಿಗೆ ಮಾರಾಟ ಮಾಡಲು ಇಚ್ಚಿಸಿದ್ದು, ಸದರಿ ಜಮೀನನ್ನು ಆರೋಪಿಯಾದ ನಿಮ್ಮ ಗಂಡನಾದ ಶ್ರೀನಿವಾಸ ಎಂಬುವರು ರೂ.38,12,500/– ಗಳಿಗೆ ಖರೀದಿ ಮಾಡಲು ಒಪ್ಪಿಕೊಂಡಿದ್ದು, ಈ ಸಂಬಂಧ ಮುಂಗಡವಾಗಿ ರೂ.8,00,000/– ಗಳನ್ನು ಪಿರ್ಯಾದಿದಾರರಿಗೆ ಪಾವತಿ ಮಾಡಿದ್ದು, ದಿನಾಂಕ 23.05.2024 ರಂದು ಪಿರ್ಯಾದಿದಾರರು ಆರೋಪಿಯಾದ ನಿಮ್ಮ ಗಂಡನಾದ ಶ್ರೀನಿವಾಸ ಎಂಬುವವರ ಹೆಸರಿಗೆ ನೊಂದಾಯಿತ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರ:

ಪ್ರಶ್ನೆ: 3 ಫ್ರಾಸಾ 1 ರವರು ಮುಂದುವರೆದು, ನೊಂದಣಿಯಾದ ನಂತರ ಆರೋಪಿಯಾದ ನಿಮ್ಮ ಗಂಡನಾದ ಶ್ರೀನಿವಾಸರವರು ಪಿರ್ಯಾದಿದಾರರಿಗೆ ರೂ.10,00,000/– ಗಳಿಗೆ ಚೆಕ್ ಗಳನ್ನು ಕೊಡುವುದಾಗಿ ಹೇಳಿ, ಆರೋಪಿಯಾದ ನಿಮಗೆ ಎರಡು ಚೆಕ್ ಗಳನ್ನು ನೀಡುವಂತೆ ತಿಳಿಸಿದ ಮೇರೆಗೆ ಆರೋಪಿಯಾದ ನೀವು ಜಮೀನನ್ನು ಖರೀದಿ ಮಾಡಿದ ಉಳಿದ ಹಣವನ್ನು ಹಿಂತಿರುಗಿಸುವ ಸಲುವಾಗಿ ನಿಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ ಸಂಖ್ಯೆ 143798 ದಿನಾಂಕ 23.05.2024 ರಂದು ರೂ.5,00,000/– ವನ್ನು ನಮೂದಿಸಿ ಮತ್ತು ಚೆಕ್ ಸಂಖ್ಯೆ 143799 ದಿನಾಂಕ 23.05.2024 ರಂದು ರೂ.5,00,000/– ವನ್ನು ನಮೂದಿಸಿ ಕೆನರಾ ಬ್ಯಾಂಕ್, ಹಂಪಾಪುರ ಶಾಖೆಯ ಎರಡು ಚೆಕ್‌ಗಳನ್ನು ನೀಡಿದ್ದು, ಅವುಗಳನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ತನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರ:

ಪ್ರಶ್ನೆ: 4 ಫ್ರಾಸಾ 1 ರವರು ಮುಂದುವರೆದು, ಆರೋಪಿಯ ಕೋರಿಕೆಯ ಮೇರೆಗೆ ಸದರಿ ಚೆಕ್ ಗಳನ್ನು ನ್ನು ಕೆನರಾ ಬ್ಯಾಂಕ್, ಹಂಪಾಪುರ ಶಾಖೆಯಲ್ಲಿ ನಗದೀಕರಿಸಲು ಸಲ್ಲಿಸಿದ್ದು, ಆದರೆ ಆರೋಪಿಯ ಬ್ಯಾಂಕ್‌ನವರು "Funds Insufficient" ಎಂಬ ಕಾರಣ ನೀಡಿ ಚೆಕ್ ಗಳನ್ನು

ಅಮಾನ್ಯಗೊಳಿಸಿ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 5 ಫ್ರಾಸಾ 1 ರವರು ಮುಂದುವರೆದು, ಚೆಕ್ ಗಳು ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 18.06.2024 ರಂದು ಆರೋಪಿಗೆ ತನ್ನ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್ ನಲ್ಲಿನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ ಆದರೂ ಸಹಾ ಆರೋಪಿಯು ಚೆಕ್ ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 6 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್ ನ್ನು ನೀಡಿರುತ್ತಾರೆ ಮತ್ತು ಚೆಕ್ ನ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿ–1 ರಿಂದ ನಿಪಿ–13 ನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 7 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 8 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆಃ 9  ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

(ಸಂತೋಷ ಕೊಠಾರಿ )

ದಿನಾಂಕಃ 13.07.2026.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೆಚ್.ಡಿ.ಕೋಟೆ.